ಉ) ಅಂಗಾಶಂ ಕೃಷಿ ವಿಧಾನದಿಂದ ಬಾಳೆ, ವೆನಿಲ್ಲಾ, ಪಚೋಲಿ, ಸೇವಂತಿಗೆ, ಅಲಂಕಾರಿಕ ಗಿಡಗಳನ್ನು ಉತ್ಪಾದಿಸಿ ರೈತರಿಗೆ ವಿತರಿಸಲಾಗುತ್ತಿದೆ.

ಊ) ಕ್ಷೇತ್ರ / ನರ್ಸರಿಗಳನ್ನು ರೈತರಿಗೆ ಮತ್ತು ಸಾರ್ವಜನಿಕರಿಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

ಈ) ಇಲ್ಲ

ಉ) ತೋಟಗಾರಿಕೆ ಕ್ಷೇತ್ರಗಳನ್ನು ಉತ್ತಮ ಗುಣಮಟ್ಟದ ಗಿಡಗಳ ಉತ್ಪಾದನೆ ಮತ್ತು ವಿತರಣೆಗೆ ರೈತರಿಗೆ ಪ್ರಾತ್ಯಕ್ಷತೆಗಳಾಗಿ ಅಭಿವೃದ್ಧಿ ಮಾಡಲು ಹಾಗೂ ಸ್ಥಳೀಯ ಭೂ ಹವಾಗುಣಗಳಿಗೆ ಬೆಳೆಗಳು ಹೊಂದಿಕೊಳ್ಳುವ ಬಗ್ಗೆ ಅಧ್ಯಯನ ನಡೆಸಲು ಸ್ಥಾಪಿಸಲಾಗಿದೆ. ಆದುದರಿಂದ ಎಲ್ಲವೂ ಲಾಭ ಮಾಡುತ್ತಿರುವುದಿಲ್ಲ. ಪ್ರತಿ ವರ್ಷ ಇಲಾಖೆಗೆ ನೀಡುವ ಆಯವ್ಯಯ ಕೊರತೆಯಿಂದ ಈ ಕ್ಷೇತ್ರಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಲು ತೊಂದರೆಯಾಗಿದೆ. ಆದರೆ ಈ ಕ್ಷೇತ್ರಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸಲು ಖಾಸಗೀಕರಣ ಅಥವಾ ಬೇರೆ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆದಾಗ್ಯೂ ಇವುಗಳ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರವು ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

1. ತೋಟಗಾರಿಕೆ ಕ್ಷೇತ್ರಗಳಲ್ಲಿ ವ್ಯಾಪಕ ಸಸ್ಯೋತ್ಪಾದನಾ ಕಾರ್ಯಕ್ರಮಗಳನ್ನು ಕೈಗೊಂಡು ರೈತರಿಗೆ ಬೇಕಾದ ಕಸಿ / ಸಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಗೂ ಸುಲಭ ದರದಲ್ಲಿ ಒದಗಿಸುವುದು.
2. ತೋಟಗಾರಿಕೆ ಕ್ಷೇತ್ರಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ವ್ಯಾಪಕ ಪ್ರಮಾಣದಲ್ಲಿ ರಾಜ್ಯದ್ಯಾಂತ ಕೈಗೊಳ್ಳಲಾಗಿದೆ.
3. ನೀರಿನ ಕೊರತೆ ನೀಗಿಸಲು ಹೆಚ್ಚಿನ ಸಂಖ್ಯೆಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಲಾಗುತ್ತಿದೆ.
4. ಇತ್ತೀಚೆಗೆ ಬಿಡುಗಡೆಯಾದ ನೀರಿನ ನವೀನ ಹಾಗೂ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಪರಿಚಯಿಸಿ, ಅವುಗಳ ಸಸ್ಯಾಭಿವೃದ್ಧಿಗೆ ಕ್ರಮ ಏರ್ಪಡಿಸಲಾಗಿದೆ.
5. ಕ್ಷೇತ್ರದ ಹೆಚ್ಚುವರಿ ಕೆಲಸ ಕಾರ್ಯಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉಡುಪಿ ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳು

4 (40) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? ತಾಲ್ಲೂಕುವಾರು ವಿವರ ಒದಗಿಸುವುದು.

ಆ) ಜನಸಂಖ್ಯೆಗನುಗುಣವಾಗಿ ಇನ್ನೂ ಎಷ್ಟು ಅಂಗನವಾಡಿ ಕೇಂದ್ರಗಳು ಮಂಜೂರಾತಿ ಆಗಬೇಕಾಗಿದೆ?

ಇ) ಉಡುಪಿ ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಬಳಿ ಇದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಉಡುಪಿ ಜಿಲ್ಲೆಯಲ್ಲಿ ಒಟ್ಟು 1027 ಅಂಗನವಾಡಿ ಕೇಂದ್ರಗಳಿವೆ ತಾಲ್ಲೂಕುವಾರು ವಿವರ ಈ ಕೆಳಗಿನಂತಿರುತ್ತದೆ.

ತಾಲ್ಲೂಕಿನ ಹೆಸರು		ಕೇಂದ್ರಗಳ ಸಂಖ್ಯೆ
1. ಕಾರ್ಕಳ	-	189
2. ಕುಂದಾಪುರ	-	343
3. ಉಡುಪಿ	-	495
ಒಟ್ಟು :	-	**1027**

ಆ) ಜನಸಂಖ್ಯೆಗನುಗುಣವಾಗಿ ಇನ್ನೂ 75 ಅಂಗನವಾಡಿ ಕೇಂದ್ರಗಳು ಮಂಜೂರಾತಿ ಆಗಬೇಕಾಗಿದೆ.

ಇ) ಉಡುಪಿ ಜಿಲ್ಲೆಯಲ್ಲಿ 75 ಹೆಚ್ಚುವರಿ ಅಂಗನವಾಡಿ ಕೇಂದ್ರಗಳಿಗೆ ಪ್ರಸ್ತಾವನೆ ಬಂದಿರುತ್ತದೆ. ದಿನಾಂಕ : 16-09-02ರ ಕೇಂದ್ರ ಸರ್ಕಾರದ ಪತ್ರದಲ್ಲಿ ಯೋಜನಾ ಆಯೋಗದಿಂದ ಹೆಚ್ಚುವರಿ ಸಂಪನ್ಮೂಲ ಒದಗಿಸಿದಾಗ ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುತ್ತದೆ ಎಂದು ತಿಳಿಸಿರುತ್ತದೆ.

ರಾಜ್ಯದಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಅಸ್ತಿತ್ವ

5 (23) ಶ್ರೀ ಯು.ಆರ್. ಸಭಾಪತಿ (ಉಡುಪಿ ಜಿಲ್ಲೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 31-12-2002 ರಲ್ಲಿದ್ದಂತೆ ಅಸ್ತಿತ್ವಕ್ಕೆ ಬಂದಿರುವ ಒಟ್ಟು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡಿರಿ)

ಆ) ಈ ಗುಂಪುಗಳು 31-12-2002 ರೊಳಗೆ ಉಳಿತಾಯ ಮಾಡಿರುವ ಹಾಗೂ ಆಂತರಿಕ ಸಾಲ ನೀಡಿರುವ ಹಾಗೂ ಸಾಲ ವಸೂಲು ಮಾಡಿರುವ ವಿವರಗಳೇನು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ 31-12-2002ರ ಅಂತ್ಯಕ್ಕೆ 74,384 ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಅಸ್ತಿತ್ವದಲ್ಲಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಆ) ಈ ಗುಂಪುಗಳು 31-12-2002 ರೊಳಗೆ ರೂ. 110.46 ಕೋಟಿ ಉಳಿತಾಯ ಮಾಡಿರುತ್ತವೆ.

ರೂ. 132.02 ಕೋಟಿ ಆಂತರಿಕ ಸಾಲ ನೀಡಿರುತ್ತವೆ ಹಾಗೂ ರೂ. 71.06 ಕೋಟಿ ಸಾಲ ವಸೂಲು ಮಾಡಿರುತ್ತವೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ)